## ನಿಮ್ಮೊಡನೆ

# ಬಾಲ್ಯವಿವಾಹ ನಿಗ್ರಹಕ್ಕೆ ಸರ್ಕಾರಗಳಿಗೆ ಬೇಕು ಇಚ್ಛಾಶಕ್ತಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಉದ್ಯೋಗಕ್ಕೆ ದೊರಕಲಿ ಒತ್ತು

**ಬಾಲ್ಯವಿವಾಹವು ನಿರ್ದಿಷ್ಟ ಧರ್ಮ, ಪ್ರದೇಶ ಅಥವಾ ಜಾತಿಗೆ ಸೀಮಿತವಾಗಿಲ್ಲ. ಎಲ್ಲ ಸಮುದಾಯಗಳಲ್ಲಿಯೂ ಇದು ಹಾಸುಹೊಕ್ಕಾಗಿದೆ. ಬಾಲ್ಯವಿವಾಹ ನಿಷೇಧ ಕಾಯ್ದೆಯ ಪರಿಣಾಮಕಾರಿ ಜಾರಿಗೆ ಸರ್ಕಾರಗಳು ಹೆಚ್ಚು ಆಸ್ಥೆ ವಹಿಸಬೇಕು; ಸಮಸ್ಯೆಯನ್ನು ಕೊನೆಗಾಣಿಸಲು ಇಚ್ಛಾಶಕ್ತಿ ತೋರಬೇಕು.**


ಈಶ್ವರ್

ಯಾವುದೇ ವ್ಯಕ್ತಿಯ ಜೀವನದಲ್ಲಿ ಬಾಲ್ಯ ಎಂಬುದು ಅತ್ಯಂತ ಮಹತ್ವದ ಒಂದು ಘಟ್ಟ. ಕುಲ, ಮತ, ಅಂತಸ್ತಿನ ಭೇದವಿಲ್ಲದೆ ಆಡಿ ನಲಿಯುವಂತಹ ಸಂತೋಷಭರಿತ ಹಂತ. ಹೀಗೆ ಆಡಿಕೊಂಡಿರಬೇಕಾದ ವಯಸ್ಸಿನ ಹುಡುಗಿಯ ಮೇಲೆ ಅನೇಕ ಸಿಕ್ಕುಗಳಿಂದ ಕೂಡಿದ ಸಂಸಾರವೆಂಬ ಹೊಣೆ ಹೇರಿದರೆ, ಆ ಮುಗ್ಧ ಬಾಲೆಯ ಬಾಲ್ಯದ ಗತಿ ಏನಾಗಬೇಡ!?

ಬಾಲ್ಯವಿವಾಹವು ಸುಂದರವಾಗಿರಬೇಕಾದ ಇಂತಹ ಅಮೂಲ್ಯ ಬಾಲ್ಯವನ್ನು ಕಸಿದುಕೊಳ್ಳುತ್ತದೆ. ಕಾನೂನು–ಕಟ್ಟಲೆ ಮೂಲಕ ಇದನ್ನು ತಡೆಯುವ ಪ್ರಯತ್ನಗಳು ಶುರುವಾಗಿ ದಶಕಗಳೇ ಉರುಳಿವೆ. ‘ಶಾರದಾ ಕಾಯ್ದೆ’ ಎಂದೇ ಹೆಸರಾದ ಬಾಲ್ಯವಿವಾಹ ನಿಗ್ರಹ ಕಾಯ್ದೆಯು ಭಾರತದಲ್ಲಿ 1929ರಲ್ಲಿ ರೂಪುಗೊಂಡು, 1930ರಲ್ಲಿ ಜಾರಿಗೆ ಬಂದಿತು. ಕಾನೂನಿನ ಮೂಲಕ ತಡೆಯುವ ಮೊದಲ ಪ್ರಯತ್ನ ಇದು. ಇನ್ನು ಐದಾರು ವರ್ಷ ಕಳೆದರೆ ಈ ಪ್ರಯತ್ನಕ್ಕೆ ನೂರು ವಸಂತ ತುಂಬಲಿದೆ. ಜಾರಿಗೊಂಡ ಬಳಿಕ ಈ ಕಾಯ್ದೆಯು ತಿದ್ದುಪಡಿಗೆ ಒಳಗಾಗಿದೆ, ಮತ್ತಷ್ಟು ಬಿಗಿಯಾಗಿದೆ. ದಂಡ, ಶಿಕ್ಷೆಯನ್ನೂ ಒಳಗೊಂಡಿದೆ.

ಇಷ್ಟಾಗಿಯೂ ಬಾಲ್ಯವಿವಾಹಗಳನ್ನು ಮೂಲೋತ್ಪಾಟನೆ ಮಾಡಲು ಇಂದಿಗೂ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸದ ಸಂಗತಿ. ಈ ಬಗೆಯ ವಿವಾಹಗಳು ತೆರೆಮರೆಯಲ್ಲಿ ನಡೆಯುತ್ತಲೇ ಇವೆ. ಹೆಣ್ಣುಮಗಳನ್ನು ಹೊರೆ ಎಂದು ಭಾವಿಸುವ ಸಮಾಜದ ಮನಃಸ್ಥಿತಿಯಲ್ಲಿ ಬದಲಾವಣೆ ಆಗಿದ್ದರೂ ಪೂರ್ತಿ ಅಳಿಸಿಹೋಗಿಲ್ಲ ಎಂಬುದಕ್ಕೆ ಕದ್ದುಮುಚ್ಚಿ ಈಗಲೂ ನಡೆಯುತ್ತಿರುವ ಬಾಲ್ಯವಿವಾಹಗಳೇ ಪುರಾವೆ ಒದಗಿಸುತ್ತವೆ.

ಬಾಲ್ಯವಿವಾಹ ನಿಷೇಧ ಕಾಯ್ದೆಯ (2006) ಪರಿಣಾಮಕಾರಿ ಅನುಷ್ಠಾನಕ್ಕೆ ಸುಪ್ರೀಂ ಕೋರ್ಟ್ ಈಚೆಗೆ ಕೆಲವು ಮಾರ್ಗಸೂಚಿಗಳನ್ನು ನೀಡಿರುವುದು ಈ ದಿಸೆಯಲ್ಲಿ ಗಮನಾರ್ಹ. ಯಾವುದೇ ವೈಯಕ್ತಿಕ ಕಾನೂನಿನಡಿ ಸಂಪ್ರದಾಯಗಳನ್ನು ಉಲ್ಲೇಖಿಸಿ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ದುರ್ಬಲಕೆ ಮಾಡುವಂತಿಲ್ಲ ಎಂದು ಕೋರ್ಟ್ ಸ್ಪಷ್ಟವಾಗಿ ತಿಳಿಹೇಳಿದೆ. ಅಂದರೆ, ಸಂಪ್ರದಾಯಗಳ ಹೆಸರಿನಲ್ಲಿ ಈ ಕಾಯ್ದೆಯ ಅನುಷ್ಠಾನಕ್ಕೆ ಅಡ್ಡಿ ಉಂಟುಮಾಡಲು ಸಾಧ್ಯವಿಲ್ಲ ಎಂದು ಸೂಚಿಸಿದೆ.

‘ಬಾಲ್ಯದಲ್ಲೇ ಮದುವೆ ಮಾಡಿಕೊಳ್ಳುವ ಹೆಣ್ಣುಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೆ, ಸಾಮಾಜಿಕವಾಗಿಯೂ ಏಕಾಂಗಿಯಾಗುತ್ತಾರೆ... ಬಾಲ್ಯದಲ್ಲಿ ಮದುವೆ ಆಗುವ ಗಂಡುಮಕ್ಕಳು ಹೆಚ್ಚಿನ ಜವಾಬ್ದಾರಿಯನ್ನು ಒತ್ತಾಯಪೂರ್ವಕವಾಗಿ ಹೊರಬೇಕಾಗುತ್ತದೆ...’ ಎಂದು ನ್ಯಾಯಪೀಠ ಹೇಳಿರುವ ಮಾತು ಪೋಷಕರ ಕಣ್ಣು ತೆರೆಸಬೇಕಿದೆ. ಬಾಲ್ಯವಿವಾಹವು ಮಕ್ಕಳ ಸ್ವಾಯತ್ತೆ, ಪೂರ್ಣವಾಗಿ ವಿಕಾಸಗೊಳ್ಳುವ ಹಕ್ಕು ಮತ್ತು ಬಾಲ್ಯವನ್ನು ಆನಂದಿಸುವ ಹಕ್ಕನ್ನು ಕಿತ್ತುಕೊಳ್ಳುತ್ತದೆ ಎಂದೂ ಕೋರ್ಟ್ ಹೇಳಿದೆ.

ಬಾಲ್ಯವಿವಾಹ ತಡೆಯಲು ವಿಶೇಷವಾದ ಪೊಲೀಸ್ ಘಟಕಗಳನ್ನು ಬಳಸಿಕೊಳ್ಳಬೇಕು, ಜಿಲ್ಲಾ ಮಟ್ಟದಲ್ಲಿ ಬಾಲ್ಯವಿವಾಹ ನಿಷೇಧ ಅಧಿಕಾರಿಗಳನ್ನು ನೇಮಕ ಮಾಡಬೇಕು, ಮ್ಯಾಜಿಸ್ಟ್ರೇಟರ ಕೈ ಬಲಪಡಿಸಬೇಕು, ಪ್ರಕರಣಗಳ ವಿಚಾರಣೆಗೆ ವಿಶೇಷವಾದ ತ್ವರಿತಗತಿ ನ್ಯಾಯಾಲಯ ಆರಂಭಿಸಬೇಕು ಎಂಬ ನಿರ್ದೇಶನಗಳನ್ನು ಸಹ ನ್ಯಾಯಪೀಠ ನೀಡಿದೆ.

ಬಾಲ್ಯವಿವಾಹ ನಿಷೇಧ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು, ಬಾಲ್ಯವಿವಾಹಕ್ಕೆ ಸಂಬಂಧಿಸಿದ ನಿಶ್ಚಿತಾರ್ಥವನ್ನೂ ನಿಷೇಧಿಸುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸಂಸತ್ತಿಗೆ ಕೋರ್ಟ್ ಸಲಹೆ ನೀಡಿದೆ. ನಮ್ಮ ಸಂಸದರು ಪಕ್ಷಭೇದ ಮರೆತು ಈ ದಿಸೆಯಲ್ಲಿ ಗಮನಹರಿಸಬೇಕು. ಈ ಕಾಯ್ದೆಯ ಅಡಿಯಲ್ಲಿ ದಂಡವನ್ನು ತಪ್ಪಿಸಿಕೊಳ್ಳಲು ನಿಶ್ಚಿತಾರ್ಥವನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ಕಳವಳ ವ್ಯಕ್ತವಾಗಿರುವ ಕಾರಣ ಈ ಸೂಚನೆ ಹೊರಬಿದ್ದಿದೆ.

ಬಾಲ್ಯವಿವಾಹವು ಯಾವುದೋ ಒಂದು ಧರ್ಮ, ಪ್ರದೇಶ ಅಥವಾ ಜಾತಿಗೆ ಸೀಮಿತವಾಗಿಲ್ಲ. ಎಲ್ಲ ಸಮುದಾಯಗಳಲ್ಲಿಯೂ ಇದು ಹಾಸುಹೊಕ್ಕಾಗಿದೆ. ಬಾಲ್ಯವಿವಾಹ ನಿಷೇಧ ಕಾಯ್ದೆಯು ಬಾಲ್ಯವಿವಾಹವನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುತ್ತದೆ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಂಡುಮಕ್ಕಳನ್ನು ಹಾಗೂ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳನ್ನು ಈ ಕಾಯ್ದೆಯು ಬಾಲಕ, ಬಾಲಕಿಯರು ಎಂದು ಪರಿಗಣಿಸುತ್ತದೆ. ಕಾನೂನಿನ ಪರಿಣಾಮಕಾರಿ ಜಾರಿಗೆ ಸರ್ಕಾರಗಳು ಹೆಚ್ಚು ಆಸ್ಥೆ ವಹಿಸಬೇಕಾದ ಜರೂರು ಇದೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ತಕ್ಕಮಟ್ಟಿಗೆ ಒತ್ತು ದೊರೆತಿರುವುದು, ಮಹಿಳೆಯರಿಗೆ ಉದ್ಯೋಗ ಮತ್ತು ಇತರ ಆರ್ಥಿಕ ಅವಕಾಶಗಳ ಬಾಗಿಲು ತೆರೆದುಕೊಂಡಿರುವುದು ಹಾಗೂ ಬಾಲ್ಯವಿವಾಹವು ಕಾನೂನುಬಾಹಿರ ಎಂಬುದರ ಬಗ್ಗೆ ತಿಳಿವಳಿಕೆ ಮೂಡಿಸುವ ಕೆಲಸಗಳು ನಿರಂತರವಾಗಿ ನಡೆದಿರುವುದು ಬಾಲ್ಯವಿವಾಹ ನಿಗ್ರಹ ನೆಲೆಯಲ್ಲಿ ಗುಣಾತ್ಮಕ ಪರಿಣಾಮ ಬೀರಿವೆ. ಹೀಗಿದ್ದರೂ ಸಾಮಾಜಿಕವಾಗಿ ಹಿಂದುಳಿದಿರುವಿಕೆ, ಬಡತನ ಮತ್ತು ಶಿಕ್ಷಣದ ಕೊರತೆಯು ಈ ಪಿಡುಗನ್ನು ಇನ್ನೂ ಜೀವಂತವಾಗಿರಿಸಲು ಕಾರಣವಾಗಿವೆ ಎಂಬುದು ನಮ್ಮ ಎದುರಿಗೆ ಇರುವ ಕಹಿಸತ್ಯ. ಅರಿವು ಮತ್ತು ಸಬಲೀಕರಣದ ಮೂಲಕ ಈ ಸಮಸ್ಯೆಯನ್ನು ಕೊನೆಗಾಣಿಸಲು ಸರ್ಕಾರಗಳು ಇಚ್ಛಾಶಕ್ತಿ ತೋರಬೇಕು.

■ ಎನ್. ಉದಯಕುಮಾರ್